ಶ್ರೀ ಪಂಪಾಪತಿ.—ಈ ಒಂದು ಕಾರ್ಯ ಮಾಡಲು ಆದಷ್ಟು ಜಾಗ್ರತೆ ಪ್ರಯತ್ನಿಸುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಬಹಳ ಜಾಗ್ರತೆ ಮಾಡುತ್ತೇನೆ.

**Minor Irrigation Tanks in Sandur Taluk**

347. SRI C. RUDRAPPA (Sandur).—Will the Minister for Transport and Minor Irrigation be pleased to state :

(a) the number of Minor Irrigation Tanks and Pickups surveyed in Sandur Taluk upto the year 1979,

(b) whether the list of villages where surveys of such tanks have been completed with estimated cost and feasibility report of the same will be laid on the table of the House;

(c) whether Construction works of the following tanks had been included in the Budget for the year 1978,

1) Ankammanahal Tank,
2) Lakkalahalla Tank,
3) Nagalapur Tank,

(d) if so, the reasons for delay in taking up the above works ?

SRI M. M. J. SADYOJATHA (Minister for Transport and Minor Irrigation.—

(a) Tanks—8, Pickups—Nil

(b) List Laid on the Table*

(c) Yes

(d) Details are given in the List Laid on the Table*

ಶ್ರೀ ಸಿ. ರುದ್ರಪ್ಪ.—ನಮ್ಮ ಸಂಡೂರು ತಾಲ್ಲೂಕಿನಲ್ಲಿರತಕ್ಕ ನೀರಾವರಿ ಕೆರೆಗಳು ೮ ಎಂದೂ ಮತ್ತು ಪಿಕ್‌ಅಪ್‌ಗಳು ಇಲ್ಲವೆಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಆದರೆ ೨ ಪಿಕ್‌ಅಪ್ಸ್ ಇವೆ; ತಾವು ಒಂದೂ ಇಲ್ಲವೆಂದು ಹೇಳಿದ್ದೀರಿ. ೧೯೭೮ ಆಯವ್ಯಯದಲ್ಲಿ ೪ ಕೆರೆಗಳನ್ನು ನಿರ್ಮಾಣ ಮಾಡಲಿಕ್ಕೆ ಮಂಜೂರಾತಿ ನೀಡಿದ್ದೀರಿ. ಆದರೆ ನಿಮ್ಮ ಉತ್ತರದಲ್ಲಿ ೩ ಕೆರೆಗಳ ಹೆಸರನ್ನು ಮಾತ್ರ ಹೇಳಿ ರಾಜಾಪುರ ಕೆರೆಯ ಕೆರೆಯ ಹೆಸರನ್ನು ಬಿಟ್ಟಿದ್ದೀರಿ. ಮತ್ತು ಅವುಗಳನ್ನು ಇನ್ನೂ ಕಾರ್ಯಗತ ಮಾಡಿಲ್ಲ. ಇದರಲ್ಲಿ ಅಂಕಮ್ಮನ ಹಾಲ್ ಕೆರೆ ಬಗ್ಗೆ ಮುಖ್ಯ ಇಂಜಿನಿಯರ್‌ರವರಿಂದ ವರದಿ ಬಂದಿದೆ. ಅಲ್ಲಿ ತೀವ್ರ ಅಭಾವ ಪರಿಸ್ಥಿತಿ ಇರುವುದರಿಂದ ಆದನ್ನು ತೀವ್ರವಾಗಿ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆ ಕೆರೆಯ ಕೆಲಸವನ್ನು ವಿಶ್ವಬ್ಯಾಂಕಿನ ಯೋಜನೆ ಮೂಲಕ ತೆಗೆದುಕೊಳ್ಳಬೇಕೆಂದು ಏರ್ಪಾಡು ಮಾಡಲಾಗಿದೆ. ಆದರೆ ಆ ಭಾಗದಲ್ಲಿ ಅಭಾವ ಪರಿಸ್ಥಿತಿ ಬಹಳವಾಗಿರುವುದರಿಂದ ಆ ಕೆಲಸವನ್ನು ಸ್ಕೆರ್‌ಸಿಟಿ ವರ್ಕ್ಸ್‌ನಲ್ಲಿ ಸೇರಿಸಿಕೊಂಡು ಪ್ರಾರಂಭ ಮಾಡಬೇಕೆಂಬ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. ಒಟ್ಟಿನಲ್ಲಿ, ಆದಷ್ಟು ಜಾಗ್ರತೆ ಪ್ರಾರಂಭ ಮಾಡುತ್ತೇವೆ.

---

* Copy placed on the Karnataka Legislature Library Vide No. 13 Dated 14-3-81

ಶ್ರೀ ಸಿ. ರುದ್ರಪ್ಪ.—ಆಲ್ಲಿ ಅಭಾವ ಪರಿಸ್ಥಿತಿ ಬಹಳವಾಗಿರುವುದರಿಂದ ಈ ವಾರದಲ್ಲೇ ಮಾಡಿಸಿ ಕೊಡಬೇಕು. ದಯವಿಟ್ಟು ಈ ಬಗ್ಗೆ ಒಂದು ಆಶ್ವಾಸನೆ ಕೊಡಬೇಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದಷ್ಟು ಬೇಗ ಪ್ರಾರಂಭ ಮಾಡಿಸುತ್ತೇನೆ.

ಶ್ರೀ ಸಿ. ರುದ್ರಪ್ಪ.—ರಾಜಾಪುರ ಮತ್ತು ಅಂತಪುರ ಕೆರೆಗಳ ಬಗ್ಗೆ ಪಿ. ಡಬ್ಲ್ಯು. ಡಿ. ವರದಿ ಬಂದಿದೆ. ಆದುದರಿಂದ ಅವುಗಳನ್ನು ೧೯೮೧-೮೨ನೇ ಸಾಲಿನ ಆಯವ್ಯಯದಲ್ಲಿ ಸೇರಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ರಾಜಾಪುರದ ಕೆರೆ ಈ ವರ್ಷದ ಆಯವ್ಯಯದಲ್ಲಿ ಸೇರಿಲ್ಲ. ಅಂತಪುರದ್ದನ್ನು ಪರಿಶೀಲನೆ ಮಾಡುತ್ತೇನೆ.

## HUDCO Scheme in Mandya

436. SRI M.S. ATMANANDA (Mandya).— Will the Minister for Housing and Urban Development Department be pleased to state.

(a) whether it is a fact that there is inordinate delay in disbursing the loan amount by the Govt. to the beneficiaries who are constructing houses under HUDCO scheme in Mandya. (through Mandya T. D. B.) ;

(b) if so, the action taken in the matter ?

SRI DHARAM SINGH NARAYANA SINGH.—(Minister for Housing and Urban Development)

(a) Yes. There is some delay in the release of fund by the HUDCO,

(b) The Housing Commr., K. H. B. has since released in 2 instalments of the loan amount i.e., 50% of the loan amount. The Balance 50% is yet to be received. He has been addressed to release this amount also immediately, if the amount has since been received from the HUDCO.

ಶ್ರೀ ಎಂ. ಎಸ್. ಆತ್ಮಾನಂದ.—ಸರ್ಕಾರ, ಮಂಡ್ಯ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ೧೯೮೦-೮೧ನೇ ಸಾಲಿಗಾಗಿ ಎಷ್ಟು ಹುಡ್ಕೋ ಮನೆಗಳನ್ನು ಮಂಜೂರು ಮಾಡಿದೆ ?

ಶ್ರೀ ಧರ್ಮಸಿಂಗ್.—೧೯೮೦-೮೧ರಲ್ಲಿ ಒಟ್ಟಿಲ್ಲ ೨೯೫ ಮನೆಗಳನ್ನು ಮಂಜೂರ್ಮಾಡಲಾಗಿದೆ.

ಶ್ರೀ ಎಂ. ಎಸ್. ಆತ್ಮಾನಂದ.—ಹುಡ್ಕೋ ಮನೆಗಳಿಗೆ ಇದುವರೆಗೆ ಏನು ಸಾಲದ ಬಾಬು ಹಣವನ್ನು ಕೊಡಬೇಕಾಗಿತ್ತೋ ಅದು ಇನ್ನೂ ತಲುಪಿಲ್ಲ. ಈಗ ಏನಾಗಿದೆ ಎಂದರೆ, ಸರ್ಕಾರದಿಂದ ಏನು ಸಬ್ಸಿಡಿ ಕೊಟ್ಟಿದೆಯೋ ಅದು ಪಾತ್ರ ತಲುಪಿದೆ. ಸಾಲದ ಹಣವನ್ನು ಎಷ್ಟು ದಿವಸದಲ್ಲಿ ಕೊಡುತ್ತೀರಿ ?

ಶ್ರೀ ಧರ್ಮಸಿಂಗ್.—ತಾವು ಕೇಳುತ್ತಿರುವುದು ೧೯೭೯-೮೦ರದ್ದೋ ಅಥವಾ ೧೯೮೦-೮೧ರದ್ದೋ?

ಶ್ರೀ ಎಂ. ಎಸ್. ಆತ್ಮಾನಂದ.—೧೯೭೯-೮೦ರದ್ದು ಬಂದಿದೆ. ೧೯೮೦-೮೧ರದ್ದು ಇನ್ನೂ ಬಂದಿಲ್ಲ.

ಶ್ರೀ ಧರ್ಮಸಿಂಗ್.—ತಾವು ಪ್ರಶ್ನೆ ಕೇಳಿರುವುದು ೬-೬-೧೯೮೦ರಲ್ಲಿ. ಈಗಾಗಲೇ ನಾವು ೨೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಏನು ಕೊಡಬೇಕಾಗಿತ್ತು ಆದನ್ನು ಬಿಡುಗಡೆ ಮಾಡಿದ್ದೇವೆ. ೧೯೮೦-೮೧ಕ್ಕೆ ಈಗ ಹಣ ಕೊಡುತ್ತಿದ್ದೇವೆ.